ಹಾಗೂ ಇಂಗ್ಲೆಂಡ್‌ವರೆಗೂ ಹೋಗಿ 'ಈ ವಿಳಾಸದಲ್ಲಿಲ್ಲ' ಎಂಬ ಟಪಾಲು ಟಿಪ್ಪಣಿ ಹೊತ್ತ ಮುಂದಿನವನ್ನೂ ಓದಿ ಮೆಲುಕು ಹಾಕುವುದು. ಓದುತ್ತ ಹೋದಂತೆ ಅಲ್ಲಿನ ಭಾವನೆಯ ಉತ್ಕಟತೆಗೆ, ಅಪ್ಪಟ ಕಾವ್ಯಮಯ ಭಾಷೆಗೆ ತಾನೇ ತಲೆದೂಗುತ್ತ ಇದರಲ್ಲಿ ಷೇಕ್ಸ್‌ಪಿಯರಿಗೆ ಕಲಿಸುವುದು ಬಹಳವಿದೆ ಅಂದುಕೊಳ್ಳುವುದು. ಹಾಗೆಯೇ ದೀಪವನ್ನೂ ಆರಿಸದೆ ನಿದ್ದೆ ಹೋಗುವುದು. ಬೆಳಗ್ಗೆ ಐತಾಳರ ಮಾಣಿ 'ಸ್ವಾಮಿ, ಕಾಫಿ' ಎಂದು ಕೂಗುತ್ತ ಬಾಗಿಲು ಬಡಿದಾಗಲೇ ಎಚ್ಚರ.

ಮಾಮೂಲಿನಂತೆ ಒಂದು ದಿನ ರೈಲಿನ ಡಬ್ಬಗಳ ಮುಂದೆ ಓಡಾಡುತ್ತಿದ್ದಾಗ ಒಬ್ಬ ಹುಡುಗಿ ಕಣ್ಣಿಗೆ ಬಿದ್ದಳು. ಒಂದೊಂದು ಡಬ್ಬದ ಕಿಟಕಿಯೊಳಗೂ ತಲೆಹಾಕಿ ಎಲ್ಲರನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದ ಈ ವಿಚಿತ್ರ ವ್ಯಕ್ತಿಯನ್ನು ನೋಡಿ ಅವಳಿಗೆ ತಮಾಷೆಯೆನಿಸಿತು. ಕ್ಷಣಕಾಲ ಇವನನ್ನೆ ದುರುಗುಟ್ಟಿ ನೋಡಿದಳು. ಅವಳು ಹಾಗೆ ನೋಡಿದುದನ್ನು ಕಂಡು, ಕಾಲದ ಪರಿಜ್ಞಾನವನ್ನೇ ಕಳೆದುಕೊಂಡಿದ್ದ ಸೂರಿ ಅವಳು ಜೋನಿಯೇ ಇರಬೇಕೆಂದು ಹಲ್ಲು ಕಿರಿಯುತ್ತ 'ಹಲೋ' ಅಂದ. ಅವಳಿಗೆ ದಿಗ್ಭ್ರಮೆ ಆಯಿತು. ಮುಖ ಕೆಂಪಗೆ ಮಾಡಿಕೊಂಡು 'ಬೂರ್' ಅಂದಳು. 'ಬೂರ್ ಅಲ್ಲ, ಸೂರ್, ಸೂರಿ. ಯಾಕೆ, ಗುರುತು ಹತ್ತಲಿಲ್ಲವೆ?' ಎಂದು ಅವಳ ಕಡೆ ಮುನ್ನುಗ್ಗಿದ. ಇವನು ಯಾವನೋ ಹುಚ್ಚನೆಂದು ಖಾತರಿಯಾಗಿ ಹುಡುಗಿ ದಡಾರನೆ ಕಿಟಕಿ ಮುಚ್ಚಿದಳು. ಅದೇ ಹೊತ್ತಿಗೆ ರೈಲು ಹೊರಟಿತು. ರೈಲು ಹೋದಮೇಲೆ ಸೂರಿ ಹತಾಶನಾಗಿ ಸ್ಟೇಷನ್ನಿನಲ್ಲಿಯೇ ಚಿಂತಿಸುತ್ತ ಕುಳಿತ. ಇಷ್ಟು ವರ್ಷವಾದರೂ ಜೋನಿ ಯಾಕೆ ಬರಲಿಲ್ಲ. ಅವಳಿಗೇನಾಯಿತು? ಎಲ್ಲ ಮರೆತುಹೋಯಿತೆ? ಅವತ್ತು ದೇವರ ಸಾಕ್ಷಿಯಾಗಿ ಬೆಸೆದ ಬಂಧನ ಕಳಚಿಬೀಳುತ್ತದೆ ಹೇಗೆ? ಇಲ್ಲ ಆರೋಗ್ಯ ಕೆಟ್ಟು ದೀರ್ಘ ಕಾಯಿಲೆಯಿಂದ ನರಳುತ್ತಿರಬೇಕು. ಅದಕ್ಕೆ ಬಂದಿಲ್ಲ. ಯೋಚಿಸಿದಂತೆ ಮೈನಡುಗಿತು. ದೇವರೇ, ಹಾಗಾಗದಿರಲಿ, ಬೇಕಾದರೆ ನನ್ನ ಜೀವತೊಗೊ, ಅವಳನ್ನು ಸುಖವಾಗಿಡು. ಈ ಜನ್ಮಕ್ಕಲ್ಲವಾದರೆ ಮುಂದಿನ ಜನ್ಮಕ್ಕಾದರೂ ಅವಳು ನನಗಾಗಲಿ ಎಂದು ಪ್ರಾರ್ಥಿಸಿದ.

ಅವನ ದಿನಚರಿ ನಿರ್ವಿಘ್ನವಾಗಿ ಮುಂದುವರಿದಂತೆ ಒಂದು ದಿನ ಸೂರಿ ರೈಲಿನ ಡ್ಯೂಟಿ ಮುಗಿಸಿ, ಅತೀವ ದಣಿವಾದಂತಾಗಿ ಪ್ಲಾಟ್‌ಫಾರಂನ ಮರದ ಹಸಿರುಪಟ್ಟಿ ಸೀಟಿನ ಮೇಲೆ ಗುಲ್‌ಮೊಹರ್ ಮರದ ಕೆಳಗೆ ಕೊಂಚ ಹೊತ್ತು ಸುಧಾರಿಸಿಕೊಳ್ಳಲು ಕೂತ. ಅಷ್ಟು ಬೇಗ ಮನೆಗೆ ಹೋಗಬೇಕನಿಸಲಿಲ್ಲ. ಹೋಗಿ ಮಾಡುವುದಾದರೂ ಏನಿತ್ತು? ಪ್ಲಾಟ್‌ಫಾರಂನಲ್ಲಿ ಒಂದು ನರಪಿಳ್ಳೆಯೂ ಇರಲಿಲ್ಲ. ಕೊಂಚ ದಣಿವಾರಿದ ಮೇಲೆ ಕಂಕುಳಲ್ಲಿದ್ದ ಅವತ್ತಿನ 'ಹಿಂದೂ' ಪತ್ರಿಕೆ ಬಿಚ್ಚಿ ಕಣ್ಣಾಡಿಸತೊಡಗಿದ. ಅದದೇ ಸುದ್ದಿ. ನಾಯಕರ ಭಾಷಣಗಳು, ಹೊಸ ಹೊಸ ಯೋಜನೆಗಳು, ಇಲ್ಲಿ ಹರತಾಳ, ಅಲ್ಲಿ ಗೋಲಿಬಾರು, ಇತ್ಯಾದಿ. ಸುದ್ದಿ ಯಾವುದೂ ರುಚಿಸಲಿಲ್ಲ. ಕೊನೆಯ ಪುಟಕ್ಕೆ ಬಂದಾಗ ಕೊನೆಯ ಕಾಲಂನ ಕೆಳ ಅಂಚಿನಲ್ಲಿ ಒಂದು ಸುದ್ದಿ ಪ್ರಕಟವಾಗಿತ್ತು. 'ಲಂಡನ್ನಿನ ಆ್ಯಟೆಥಿಯೇಟರ್‌ನ ಸುಪ್ರಸಿದ್ಧ ನಟಿ ಜೋನ್ ಮಾರ್ಟಿನ್ ದೀರ್ಘಕಾಲ ಕ್ಯಾನ್ಸರ್‌ನಿಂದ ನರಳಿ ತೀರಿಕೊಂಡಳು' ಹೆಸರು ಅದೇ ಜೋನ್. ಮಾರ್ಟಿನ್ ಅಂದರೇನು? ವಯಸ್ಸು ಸಹ ಲೆಕ್ಕಾಚಾರವಾಗಿ ಇಪ್ಪತ್ತೊಂದು ಪ್ಲಸ್ ಮೂವತ್ತು; ಐವತ್ತೊಂದು. ವೃತ್ತಿಯಿಂದ ನಟಿ. ಹೌದು, ಜೋನ್ ನಟಿಯಾಗುವ ತನ್ನ ಬಯಕೆ ಹೇಳಿದ್ದಳಲ್ಲವೆ? ಸೂರಿಗೆ ಕಣ್ಣು ಮಂಜಾಯಿತು. ಮೈಬೆವರಿತು. ಅಯ್ಯೋ ದೇವರೇ, ಏನು ಮಾಡಿಬಿಟ್ಟೆ?

ಸಂಜೆ ರೈಲಿಗೆ ಬಂದವರಿಗೆ ದೂರದಿಂದ ಆಶ್ಚರ್ಯವಾಯಿತು. ತೀರಾ ಗುರುತಿನವನೊಬ್ಬ ಹತ್ತಿರ ಬಂದು 'ಹಲೋ ಸೂರಿ' ಎಂದು ಹೆಗಲ ಮೇಲೆ ಕೈಯಿಟ್ಟಾಗ ಮುಖದ ಮೇಲಿದ್ದ ಪತ್ರಿಕೆ ಸರಿದು, ಸೂರಿಯ ದೇಹ ಸೀಟಿನ ಮೇಲೆ ಉರುಟಿಕೊಂಡಿತು. ಅಷ್ಟು ವರ್ಷಗಳಿಂದ ಸೂರಿ ಏಕಾಕಿಯಾಗಿ ಏಕೆ ಬದುಕಿದ್ದ, ಯಾತಕ್ಕೆ ಸತ್ತ ಎಂದು ಜಡಬಡಿದ ಆ ಊರಿನಲ್ಲಿ ಯಾರಿಗೂ ಗೊತ್ತಾಗಲಿಲ್ಲ. ಸೂರಿ ಆ ದಿವ್ಯ ಪುರಾತನ ರಹಸ್ಯವನ್ನು ತನ್ನೊಡನೆಯೇ ಕೊಂಡು ಹೋಗಿದ್ದ.

(ಮುಗಿಯಿತು)